

# ಅಪರೂಪದ ಬ್ರೆಸಿಲ್ ಮರ

**ಚಿತ್ರ – ಬರಹ: ಎಸ್. ಎನ್. ಬಿ.**

ನೋಬೆಲ್ ವಿಜ್ಞಾನಿ ಸರ್ ಸಿ. ವಿ. ರಾಮನ್ ೧೯೭೦ರಲ್ಲಿ ಗತಿಸಿದ್ದು ನಿಜ. ಆದರೆ ಅವರು ಬೆಂಗಳೂರಿನ ಅವರ ಹೆಸರಿನ ವಿಜ್ಞಾನ ಸಂಸ್ಥೆ ಮೂಲಕ ಇನ್ನೂ ಜೀವಂತ. ಅಷ್ಟೇ ಅಲ್ಲ. ಅವರ ಪಾರ್ಥಿವ ದೇಹ ಇರಿಸಿದ ಜಾಗದಲ್ಲಿ ಅಪರೂಪದ ಬ್ರೆಸಿಲ್ ಮೂಲದ ಮರ ಒಂದನ್ನು ೩೫ ವರ್ಷದ ಹಿಂದೆ ನೆಟ್ಟರು.

ಈ ಹವಾಮಾನಕ್ಕೆ ಆ ಮರ ಅಷ್ಟಾಗಿ ಒಗ್ಗಲಿಲ್ಲ. ಹಾಗೂ ಹೀಗೂ ಎತ್ತರ ಬೆಳೆದಿದೆ. ಅಪರೂಪ ಎಂಬಂತೆ ನಾಕಾರು ವರ್ಷಗಳಗೊಮ್ಮೆ ಹೂದಳೆಯುತ್ತದೆ. ಬಂಗಾರದ ಹೂಗಳ ನೋಟ ಸುಮಾರು ಒಂದು ವಾರ  ಅಥವಾ ಹತ್ತು ದಿನ ಮಾತ್ರ. ನೋಡಬೇಕಾದರೆ ನಗರದ ಮೇಕ್ರಿ ವೃತ್ತ ಸನಿಹದ ರಾಮನ್ ರಸ್ತೆಗೆ ಬನ್ನಿ.

ಹಾ, ಈ ಅಪರೂಪದ ಮರದ ಹೆಸರು ಕೇಳದಿರಾ? ಸಿಬಿಸ್ಟಾಕ್ಸ ಡೊನಾಲಸ್ಮಿತಿಯೈ.



***